# ಮಾತಾಡಿ ಧೋನಿ!



ವಿಶ್ವಕಪ್ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೆಮಿಫೈನಲ್‌ನಲ್ಲಿ ಸೋತು ಭಾರತ ಹೊರಬಿದ್ದ ಬಳಿಕ, ಮಹೇಂದ್ರಸಿಂಗ್ ಧೋನಿ ಕ್ರಿಕೆಟ್‌ನಿಂದ ನಿವೃತ್ತರಾಗುತ್ತಾರೆ ಎನ್ನುವ ಸುದ್ದಿ ಹಬ್ಬಿತ್ತು. ಆದರೆ ಆ ಸುದ್ದಿ ಹುಸಿಯಾಗಿದೆ. ಧೋನಿ ವೆಸ್ಟ್ಇಂಡೀಸ್ ಪ್ರವಾಸದಿಂದ ಮಾತ್ರ ಹೊರಗುಳಿದಿದ್ದಾರೆ. ವೆಸ್ಟ್ಇಂಡೀಸ್‌ಗೆ ಹೋಗಿ ಕ್ರಿಕೆಟ್ ಆಡುವುದರ ಬದಲು, ಕಾಶ್ಮೀರ ಕಣಿವೆಯಲ್ಲಿ ಗಡಿ ಕಾಯುವುದೇ ಲೇಸು ಎಂದು ಭಾವಿಸಿದ್ದಾರೆ. ಅದಕ್ಕೆಂದೇ ಕ್ರಿಕೆಟ್‌ನಿಂದ ಎರಡು ತಿಂಗಳ ರಜೆ ಪಡೆದಿದ್ದಾರೆ. ಜುಲೈ 31ರಿಂದ ಆಗಸ್ಟ್ 15ರವರೆಗೆ ಅವರದ್ದು ದೇಶದ ಗಡಿ ಕಾಯುವ ಕೆಲಸ. ಪ್ರಾದೇಶಿಕ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ (ಗೌರವಸೂಚಕ) ಹುದ್ದೆ ಹೊಂದಿರುವ ಧೋನಿ ಪ್ಯಾರಾಚೂಟ್ ರೆಜಿಮೆಂಟ್‌ನ ಸೈನಿಕ. ಸೇನೆಯ ಮೂಲಗಳ ಪ್ರಕಾರ, ಧೋನಿ ಇತರ ಸೈನಿಕರ ಜೊತೆಗೆ ತರಬೇತಿಯನ್ನೂ ಪಡೆಯಲಿದ್ದಾರೆ. ಬೆಂಗಳೂರು ಕೇಂದ್ರವಾಗುಳ್ಳ ಈ ರೆಜಿಮೆಂಟ್ ಸದ್ಯಕ್ಕೆ ಕಾಶ್ಮೀರ ಕಣಿವೆಯಲ್ಲಿ ಗಡಿಯ ಕೆಲಸಕ್ಕೆ ನಿಯುಕ್ತವಾಗಿದೆ. 2015ರಲ್ಲೇ ಧೋನಿ ಪ್ಯಾರಾಟ್ರೂಪರ್ ಆಗಿ ಅರ್ಹತೆ ಹೊಂದಿದ್ದರು. ಆಗ್ರಾ ತರಬೇತಿ ಶಿಬಿರದಲ್ಲಿ ಭಾರತೀಯ ವಾಯುಪಡೆಯ ವಿಮಾನದಿಂದ ಐದು ಸಲ ಪ್ಯಾರಾಚೂಟ್ ತರಬೇತಿ ಜಂಪ್ ಮಾಡಿದ್ದರು. ಈಗ ಸೇನೆಯಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಕೇಳಿ ಪಡೆದುಕೊಂಡಿದ್ದಾರೆ.

ಧೋನಿಯ ಈ ಸೈನಿಕನ ಕೆಲಸ ಹದಿನೈದೇ ದಿನಗಳದ್ದಾದರೂ ಅವರ ಅಭಿಮಾನಿಗಳು ಖುಷಿಯಾಗಿದ್ದಾರೆ. ‘ಈ ಕ್ರಿಕೆಟಿಗ ನಿಜಕ್ಕೂ ದೇಶಭಕ್ತ ಎನ್ನುವುದನ್ನು ಸಾಬೀತುಪಡಿಸಿದ್ದಾರೆ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೊಗಳಿಕೆಯ ಹೊನ್ನಮಳೆಯೇ ಸುರಿದಿದೆ. ಆದರೆ ಅದೇ ವೇಳೆ, ಧೋನಿಯನ್ನು ಟೀಕಿಸುವವರ ಸಂಖ್ಯೆಯೂ ಕಡಿಮೆಯಿಲ್ಲ. ಅಮ್ರಪಾಲಿ ಉದ್ಯಮ ಗುಂಪು ಸಹಸ್ರಾರು ಜನರಿಗೆ ಫ್ಲ್ಯಾಟ್, ಮನೆಗಳನ್ನು ಕಟ್ಟಿಸಿಕೊಡುತ್ತೇನೆಂದು ಹಣ ಪಡೆದು ವಂಚಿಸಿದ ಪ್ರಕರಣದಲ್ಲಿ ಧೋನಿಯ ಪಾಲುದಾರಿಕೆಯೂ ಇದೆ ಎನ್ನುವ ಆರೋಪದ ಹಿನ್ನೆಲೆಯಲ್ಲಿ ಧೋನಿ ಗಡಿಯಲ್ಲಿ ಸೈನಿಕನ ಕೆಲಸ ಮಾಡುವ ನಾಟಕವಾಡುತ್ತಿದ್ದಾರೆ ಎಂದು ನೂರಾರು ಜನ ಟೀಕಿಸಿದ್ದಾರೆ. ಹೀಗೆ ಟೀಕಿಸಲೂ ಕಾರಣಗಳಿವೆ.

ಅಮ್ರಪಾಲಿ ರಿಯಲ್ ಎಸ್ಟೇಟ್ ಉದ್ಯಮ ಗುಂಪಿನ ವಿವಾದದಲ್ಲಿ ಧೋನಿ ಮಾತ್ರವಲ್ಲ, ಅವರ ಪತ್ನಿ ಸಾಕ್ಷಿಯವರ ಹೆಸರೂ ತಳುಕು ಹಾಕಿಕೊಂಡಿದೆ. ರಿತಿ ಸ್ಪೋರ್ಟ್ಸ್ ಸಂಸ್ಥೆಯಲ್ಲಿ ಧೋನಿಯ ಪತ್ನಿ ಸಾಕ್ಷಿ ನಿರ್ದೇಶಕಿ. ಈ ಸಂಸ್ಥೆಯ ಜೊತೆಗೆ ಅಮ್ರಪಾಲಿ ಉದ್ಯಮ ಗುಂಪು ಒಪ್ಪಂದ ಮಾಡಿಕೊಂಡಿದ್ದು, ರಿತಿ ಸ್ಪೋರ್ಟ್ಸ್‌ಗೆ ಕೋಟ್ಯಂತರ ರೂಪಾಯಿ ಪಾವತಿಸಿದೆ. ಅಮ್ರಪಾಲಿ ರಿಯಲ್ ಎಸ್ಟೇಟ್ ಸಂಸ್ಥೆಗೆ ಧೋನಿ ರಾಯಭಾರಿಯೂ ಹೌದು. ಅದಕ್ಕೂ ಧೋನಿಗೆ ದೊಡ್ಡ ಮೊತ್ತ ಪಾವತಿಯಾಗಿದೆ. ಸುಮಾರು 7 ವರ್ಷಗಳಿಂದ ಧೋನಿಯ ಮುಖ ತೋರಿಸಿ ಅಮ್ರಪಾಲಿ ಗುಂಪು ಸಾರ್ವಜನಿಕರಿಂದ ಮನೆ, ಫ್ಲ್ಯಾಟ್ ಕಟ್ಟಿಸಿಕೊಡುವುದಾಗಿ ಹಣ ಸಂಗ್ರಹಿಸಿದೆ. 3–4 ವರ್ಷಗಳಿಂದ ಈ ಸಂಸ್ಥೆಯ ಮೇಲೆ ಸಾವಿರಾರು ಜನರು ವಂಚನೆಯ ದೂರು ನೀಡಿದ್ದು, ಸಂಸ್ಥೆಯ ಲೆಕ್ಕಪರಿಶೋಧಕರ ವರದಿ ಈಗ ಕೋರ್ಟ್ ಮುಂದಿದೆ.

ಆ ಆಡಿಟ್ ವರದಿಯಲ್ಲಿ ‘ಜನರಿಂದ ಸಂಗ್ರಹಿಸಿದ ಸುಮಾರು ₹ 6.52 ಕೋಟಿ ಹಣವನ್ನು ರಿತಿ ಸ್ಪೋರ್ಟ್ಸ್ ಸಂಸ್ಥೆಗೆ ಅಕ್ರಮವಾಗಿ ಪಾವತಿಸಲಾಗಿದೆ. ಈ ಪಾವತಿಗೆ ಸೂಕ್ತ ಕಾರಣಗಳಿಲ್ಲ’ ಎಂದು ನಮೂದಾಗಿದೆ. ಸಂಸ್ಥೆಯ ವಕ್ತಾರರು, ‘ನಮ್ಮ ಸಂಸ್ಥೆ ನೀಡಿರುವ ಸೇವೆಗೆ ಪ್ರತಿಯಾಗಿ ಪಾವತಿಯಾಗಿದೆ. ಎಲ್ಲದಕ್ಕೂ ಸೂಕ್ತ ದಾಖಲೆಗಳಿವೆ’ ಎಂದು ಸ್ಪಷ್ಟನೆ ನೀಡಿದ್ದರೂ ಕೋರ್ಟ್ ಅದನ್ನು ಒಪ್ಪಿಲ್ಲ. ಸುಪ್ರೀಂ ಕೋರ್ಟ್ ಮುಂದೇನು ಕ್ರಮ ಕೈಗೊಳ್ಳುತ್ತದೆ ಎನ್ನುವ ಕುತೂಹಲ ಈಗ ಎಲ್ಲರದ್ದು. ಈ ಮಧ್ಯೆ ಸಾರ್ವಜನಿಕರ ಒತ್ತಡದ ಹಿನ್ನೆಲೆಯಲ್ಲಿ ಧೋನಿ ಕಳೆದ ವರ್ಷ ಅಮ್ರಪಾಲಿಯ ರಾಯಭಾರಿ ಹುದ್ದೆಯಿಂದ ಹೊರಬಂದಿದ್ದಾರೆ. ಮಾತ್ರವಲ್ಲ, ಕಂಪೆನಿಯು ತನಗೆ ₹ 150 ಕೋಟಿಗೂ ಹೆಚ್ಚು ಹಣವನ್ನು ಬಾಕಿ ಇರಿಸಿದೆ ಎಂದು ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಸುಪ್ರೀಂಕೋರ್ಟ್ ಅಮ್ರಪಾಲಿ ಗುಂಪಿನ ರಿಯಲ್ ಎಸ್ಟೇಟ್ ಲೈಸೆನ್ಸನ್ನು ರದ್ದು ಮಾಡಿದೆ. ‘ರಾಜಧಾನಿ ಸುತ್ತಮುತ್ತ ಇರುವ ಅಮ್ರಪಾಲಿ ಗುಂಪಿನ ಎಲ್ಲ ಆಸ್ತಿಗಳನ್ನೂ ವಶಕ್ಕೆ ತೆಗೆದುಕೊಂಡು ಈಗಾಗಲೆ ದುಡ್ಡು ಕಟ್ಟಿರುವ ಗ್ರಾಹಕರಿಗೆ ಮನೆ/ಫ್ಲ್ಯಾಟ್‌ಗಳನ್ನು ಕಾಲಮಿತಿಯಲ್ಲಿ ಪೂರ್ತಿಗೊಳಿಸಿ ಕೊಡಬೇಕು’ ಎಂದು ಸರ್ಕಾರಿ ಸ್ವಾಮ್ಯದ ‘ರಾಷ್ಟ್ರೀಯ ಕಟ್ಟಡ ನಿರ್ಮಾಣ ನಿಗಮ’ಕ್ಕೆ ಆದೇಶಿಸಿದೆ.

‘ಬ್ರ್ಯಾಂಡ್ ಅಂಬಾಸಿಡರ್’ ಆಗಿ ಸಂಭಾವನೆ ಪಡೆಯುವುದು ಧೋನಿಗೆ ಹೊಸತೇನಲ್ಲ. ಪೆಪ್ಸಿಕೊ, ರೀಬೊಕ್, ಎಕ್ಸೈಡ್ ಇನ್ಶೂರೆನ್ಸ್, ಓರಿಯೆಂಟ್ ಫ್ಯಾನ್, ಸ್ನಿಕರ್ಸ್ ಚಾಕೊಲೇಟ್, ಕಾಲ್ಗೇಟ್, ರೆಡ್‌ಬಸ್, ಪನರೈ ಲಕ್ಸುರಿ ವಾಚ್, ಲಿವ್‌ಫಾಸ್ಟ್, ಭಾರತ್ ಮ್ಯಾಟ್ರಿಮೊನಿ, ಸೆವೆನ್ (ಸ್ಪೋರ್ಟ್ಸ್ ಬಟ್ಟೆಬರೆ), ಗೋಡ್ಯಾಡಿ, ಗಲ್ಫ್ ಆಯಿಲ್– ಹೀಗೆ 30ಕ್ಕೂ ಹೆಚ್ಚು ವಸ್ತು/ಸೇವೆಗಳಿಗೆ ಧೋನಿ ಬ್ರ್ಯಾಂಡ್ ಅಂಬಾಸಿಡರ್ ಆಗಿ ಕೋಟ್ಯಂತರ ರೂಪಾಯಿ ದುಡಿದಿದ್ದಾರೆ. ಆದರೆ ಅಮ್ರಪಾಲಿ ಗುಂಪಿನ ವಂಚನೆಯಿಂದಾಗಿ ಧೋನಿ ಮುಜುಗರದ ಪ್ರಶ್ನೆಗಳನ್ನು ಎದುರಿಸಬೇಕಿದೆ. ಈ ಹಿನ್ನೆಲೆಯಲ್ಲಿಯೇ ಧೋನಿ ಈಗ ಸೇನೆಯಲ್ಲಿ ಸೇವೆ ಸಲ್ಲಿಸಲು ಹೊರಟಿರಬಹುದೆ ಎನ್ನುವುದೀಗ ಪ್ರಶ್ನೆ. ಕ್ರಿಕೆಟ್ ಮೈದಾನದಲ್ಲಿ ಮಾಡಿದಂತೆ ಸುಮ್ಮನೆ ಮುಗುಳ್ನಕ್ಕರೆ ಸಾಲುವುದಿಲ್ಲ, ಧೋನಿ ಈಗ ಮಾತನಾಡಬೇಕಿದೆ!

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65